ಶ್ರೀ ಸಿ. ಎಂ. ಇಬ್ರಾಹಿಂ.—ಈಗಾಗಲೇ ಸ್ಪೈಪ್ಹೆಂಡರಿ ಸ್ಕೀಂನ್ನು ತೆಗೆದುಕೊಂಡಿದ್ದೇವೆ. ನಮ್ಮ ದೇಶದಲ್ಲಿ ಕೆಲಸ ಮಾಡುವವರಿಗೆ ಉದ್ಯೋಗವನ್ನು ಒದಗಿಸಿಕೊಡುವುದು ಅಗತ್ಯವೆನ್ನುವ ದೃಷ್ಟಿಯಲ್ಲಿಟ್ಟು ಕೊಂಡು ಈ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಆದರೆ ನಿರುದ್ಯೋಗಿಗಳಿಗೆ ನಿರುದ್ಯೋಗಿ ಭತ್ಯ ವನ್ನು ಕೊಡುವ ಬಗ್ಗೆ ಸಧ್ಯಕ್ಕೆ ನಮ್ಮ ರಾಜ್ಯ ಸರ್ಕಾರದಲ್ಲಿ ಯೋಜನೆ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ, ಉದ್ಯೋಗ ವಿನಿಮಯ ಕಛೇರಿಯ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ, ಆದರೆ ಅಲ್ಲಿ ಲಂಚ ರುಷುವತ್ತು ಏನು ನಡೆಯುತ್ತಿದೆ ಅದನ್ನು ಹೋಗಲಾಡಿಸುವುದಕ್ಕೆ ಏನಾದರೂ ಪ್ರಯತ್ನ ಕೈಗೊಂಡಿದ್ದೀರಾ ? ಮತ್ತು ಒಂದು ಸಾರಿ ನೋಂದಾಯಿಸಿದವರಿಗೆ ಇಂಟರ್‌ವ್ಯೂ ಆದರೂ ಸಿಗುವಂತೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಕೆಲವು ಜನರುಗಳು ಹೆಸರನ್ನು ನೋಂದಾಯಿಸಿದ್ದರೂ ಇಂಟರ್‌ವ್ಯೂಗೇ ಬರುವುದಿಲ್ಲ ಕೆಲವರ ಹೆಸರುಗಳು ಮಾತ್ರ ಬರುತ್ತದೆ, ಈ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದರ ಬಗ್ಗೆ ನಮ್ಮ ಗಮನಕ್ಕೆ ಸಾರ್ವ ಜನಿಕರು ತಂದದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟು ನೋಟೀಸ್ ಬೋರ್ಡಿನಲ್ಲೂ ಹಾಕಿದ್ದೇವೆ. ಇಂಥಾದ್ದು ಏನಾದರೂ ನಡೆದಲ್ಲಿ ಮಾನ್ಯ ಸದಸ್ಯರುಗಳು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಕೂಡಲೇ ಅಂಥವರ ವಿರುದ್ಧ ಕ್ರಮ ತಗೆದುಕೊಳ್ಳುತ್ತೇವೆ. ಮತ್ತೆ ಬೆಂಗಳೂರು ನಗರದಲ್ಲಿಯೇ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸರ್ ಮತ್ತು ಸ್ಟಾಫ್‌ಗಳು ವರ್ಷಾನುಗಟ್ಟಲೆಯಿಂದ ಏನು ಇದ್ದಾರೆ ಅಂಥವರನ್ನು ೩ ವರ್ಷಕ್ಕೊಂದು ಸಾರಿ ವರ್ಗಾವಣೆ ಮಾಡ ಬೇಕೆಂದು ಮಾಡಿದ್ದೇವೆ ಅವರೆಲ್ಲಾ ಈ ತಿಂಗಳೋ ಮುಂದಿನ ತಿಂಗಳೋ ವರ್ಗವಾಗಿ ಹೋಗುತ್ತಿದ್ದಾರೆ. ಹೀಗೆ ಮಾಡಿದಾಗ್ಯೂ ಸಹ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅದನ್ನು ತಿಳಿಸಿದರೆ ಅಂಥವರ ವಿರುದ್ಧ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನ ತಕ್ಕ ಆಶ್ವಾಸನೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮ್‌ದೇವ್.—ಯುವಕರ ಬಗ್ಗೆ ನೌಕರಿಗೆ ಸೇರಲು ಏನು ಒಂದು ವಯಸ್ಸಿನ ಮಿತಿ ಯನ್ನು ಸರ್ಕಾರ ನಿಗದಿಮಾಡಿದೆ ಆ ವಯಸ್ಸಿನಲ್ಲಿ ಅವರು ನೌಕರಿ ದೊರಕಿಸಿಕೊಳ್ಳಲು ಕಷ್ಟವಾಗಿದೆ. ಕಾರಣ ೧೦-೬ ವರ್ಷಗಳು ಅವರ ಹೆಸರುಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಂದಾಯಿಸಿದರೂ ಕೆಲಸ ದೊರೆಯದೆ ರಸ್ತೆ ರಸ್ತೆಗಳಲ್ಲಿ ಅಲೆಯುತ್ತಿದ್ದಾರೆ. ಆದ್ದರಿಂದ ಅವರ ವಯಸ್ಸಿನ ಮಿತಿ ಏನು ೩೦ ವರ್ಷಗಳು ಇದೆ ಅದನ್ನು ಇನ್ನು ಹೆಚ್ಚು ಮಾಡುತ್ತೀರಾ ? ಅವರಿಗೆ ೩೦ ವರ್ಷಗಳು ಕಳೆದರೂ ಅವರಿಗೆ ಇಂಟರ್‌ವ್ಯೂ ಕಳುಹಿಸುತ್ತಾ ಇಲ್ಲ ಆದ್ದರಿಂದ ಇನ್ನು ಒಂದೆರಡು ವರ್ಷಗಳು ಹೆಚ್ಚು ಮಾಡುವು ದಕ್ಕೆ ಸಾಧ್ಯವೇ ?

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಇನ್ನು ಮದುವೆಯಾಗದ ಬ್ರಹ್ಮಚಾರಿಗಳು ಅವರಿಗೆ ಇವತ್ತಿನ ದಿವಸ ದೇಶದಲ್ಲಿ ಯಾವರೀತಿ ನಮ್ಮ ರಾಜ್ಯದಲ್ಲಿ ಪದವೀಧರರು ಕಾರ್ಖಾನೆಗಳಿಂದ ಉತ್ಪತ್ತಿ ಯಾದ ಪದಾರ್ಥದ ರೀತಿಯಲ್ಲಿ ಹೊರಗೆ ಬರುತ್ತಿದ್ದಾರೆ ಇನ್ನು ವಯಸ್ಸಿನ ಮಿತಿ ಹೆಚ್ಚು ಮಾಡಿದರೆ ಇನ್ನು ನಿರುದ್ಯೋಗದ ಸಮಸ್ಯೆ ಜಾಸ್ತಿಯಾಗುತ್ತದೆ. ಆದ್ದರಿಂದ ಎಂಪ್ಲಾಯ್‌ಮೆಂಟ್ ಆಪರ್‌ಚ್ಯುನಿಟಿ ಜಾಸ್ತಿಮಾಡಿ ನಾವು ಎಲ್ಲರೂ ಸೇರಿ ಇದನ್ನು ನಿವಾರಿಸುವುದಕ್ಕೆ ಪ್ರಯತ್ನಪಡೋಣ.

Delay in starting the First Generator in Kaliproject, Hydel

280. SRI M. C. BASAPPA (Chamarajanagar).—Will the Chief Minister be pleased to state.—

(a) whether the work at Kali Project is in Progress as Scheduled;

(b) whether there was any delay in starting the first Generator ;

(c) reasons for the delay?

SRI R. GUNDU RAO (Chief Minister).—

(a) Yes.

(b) There was a delay of two weeks in August 1979 in rotating the machine. Thereafter the required Pre-commissioning tests were conducted until December 1979 when the machine was commissioned.

(c) Due to technical reasons.

ಶ್ರೀ ಎಂ. ಸಿ ಬಸಪ್ಪ.— ಸ್ವಾಮಿ, ಕಾಳಿನದಿ ಯೋಜನೆ ವಿಚಾರದಲ್ಲಿ ಅನೇಕ ಕಾಂಟ್ರವರ್ಸಿಯಲ್ ಸ್ಟೇಟ್‌ಮೆಂಟ್ ಬಂದಿದೆ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಒಂದು ಹೇಳಿದ್ದಾರೆ..... "Kalinadi Hydel project which was expected to be completed in 1978 has become a problem project and remains so;" ಇದರ ಅರ್ಥ ಏನು ? ಇನ್ನು ಅಧಿಕಾರಿಗಳು ಕೊಟ್ಟಿರತಕ್ಕಂಥಾದ್ದು ಮತ್ತೆ ಇಲ್ಲಿ ನಾವು ಕೇಳಿರತಕ್ಕ ಪ್ರಶ್ನೆಗೆ ಕೊಟ್ಟಿರತಕ್ಕಂಥಾದ್ದು ಸರಿಯೇ ಇದನ್ನು ನೋಡಿದರೆ ಯಾವುದು ಸರಿ ಏಂದು ನಾವು ತಿಳಿದುಕೊಳ್ಳಬೇಕು ?

ಶ್ರೀ ಆರ್. ಗುಂಡೂರಾವ್.—ಸ್ಟೇಟ್‌ಮೆಂಟಿಗೂ ಇಲ್ಲಿ ಸದನದಲ್ಲಿ ಕೊಟ್ಟಿರತಕ್ಕ ಉತ್ತರಕ್ಕೂ ಸಂಬಂಧವಿಲ್ಲ, ಸ್ಟೇಟ್‌ಮೆಂಟ್‌ನಲ್ಲಿ ನಾವು ಹೇಳುವುದೂ ಒಂದು, ಪತ್ರಿಕೆಗಳಲ್ಲಿ ಬರುವುದು ಒಂದು, ಆದ್ದರಿಂದ ಸ್ಟೇಟ್‌ಮೆಂಟ್‌ಗೂ ಈ ಪ್ರಶ್ನೆಗೂ ಸಂಬಂಧ ಬರುವುದಿಲ್ಲ, ತಾವು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.— ಈ ಯೋಜನೆ ಏನು ನಿಶ್ಚಯಿಸಿದ ಸಮಯದಲ್ಲಿ ನಡೆಯುತ್ತಿದೆಯೇ ? ಅಥವಾ ಅದು ನಿಶ್ಚಿತ ಸಮಯದ ಪ್ರಕಾರ ನಡೆಯುತ್ತಿಲ್ಲವೇದು ಹೇಳುತ್ತಿರುವುದು ನಿಜವೇ ? ಅದು ನಿಗದಿಯಾದ ಸಮಯಕ್ಕೆ ಸರಿಯಾಗಿ ಪ್ರಗತಿಯಾಗಿದೆಯೇ ?

ಶ್ರೀ ಆರ್. ಗುಂಡೂರಾವ್.—ಪ್ರಗತಿಯಲ್ಲಿ ಇದೆ, ಕೆಲಸ ನಡೆಯುತ್ತಿದೆ. ಹಂತ ಹಂತವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಪ್ರಗತಿಯಲ್ಲಿ ಇದೆ ಎಂದು ಹೇಳಿದರೆ, you have got a programme of action. May I know whether you have followed according to the programme ?

ಶ್ರೀ ಆರ್. ಗುಂಡೂರಾವ್.—ನಿಶ್ಚಯಿಸಿದಂತೆ ಕೆಲಸ ಆಗದೆ ಇರುವುದಕ್ಕೆ ಹಲವಾರು ತೊಂದರೆಗಳು ಬರುತ್ತವೆ. ಕೆಲವು ಸಂದರ್ಭದಲ್ಲಿ ಫ್ಲಡ್ ಬಂದುಬಿಡುತ್ತದೆ ಅಥವಾ ಕಂಟ್ರಾಕ್ಟರ್‌ಗಳಿಗೆ ಮುಂಗಡವಾಗಿ ಬೇಕಾಗುವಷ್ಟು ಹಣ ಕೊಡದೆ ಇರುವ ಸಮಸ್ಯೆಗಳು ಇರುತ್ತವೆ ಆದ್ದರಿಂದ ಕೆಲವು ಸಂದರ್ಭಗಳಲ್ಲಿ ಕೆಲಸ ನಿಧಾನವಾಗುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ಕಾರ್ಯಕ್ರಮದ ಪ್ರಕಾರ ಪ್ರಥಮ ಉತ್ಪಾದನಾ ಯಂತ್ರ ೭೯ರಲ್ಲಿ ಪ್ರಾರಂಭಿಸುವುದರಲ್ಲಿ ಇತ್ತು ಆದರೆ..... till today it is not generating the power expected..... ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಆರ್. ಗುಂಡೂರಾವ್.— ೭೯ರಲ್ಲಿ ಏನು ಆಗಿದೆ ಎಂದು ಉತ್ತರದಲ್ಲಿ ಹೇಳಿದ್ದೇನೆ. ಆದರೆ ನಾನಾ ಕಾರಣಗಳಿಂದ ನಿಧಾನವಾಗಿದೆ, ಪೂರ್ತಿಯಾಗಬೇಕಾದರೆ ೧೯೮೪ರ ಹೊತ್ತಿಗೆ ಪೂರ್ತಿಯಾಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಕಾಳಿ ಯೋಜನೆ ಬಗ್ಗೆ ಪತ್ರಿಕಾವರದಿಗೂ ತಮ್ಮ ಸ್ಟೇಟ್‌ಮೆಂಟಿಗೂ ವ್ಯತ್ಯಾಸವಿದೆ ಎಂದು ಹೇಳಿದರು ? ಮುಖ್ಯ ಮಂತ್ರಿಗಳ ಸ್ಥಾನ ಬಹಳ ಜವಾಬ್ದಾರಿಯುತವಾದುದು ಮತ್ತೆ ಅವರು ಪಾರ್ಲಿಮೆಂಟ್ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುವಾಗ ಹಲವಾರು ಆರೋಪ ಪ್ರತ್ಯಾರೋಪಗಳು ಬಂಟುವೆ ಎಂದು ತಿಳಿದಿದೆ. ಆದ್ದರಿಂದ ದಯಮಾಡಿ ಈ ಸಂದರ್ಭದಲ್ಲಿ ಈ ಸಭೆಗೆ ನಿಖರವಾದ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಪಾರ್ಲಿಮೆಂಟ್ ಸದಸ್ಯರು ಹೇಳಿದಂತೆ ಆರೋಪದ ಬಗ್ಗೆ ಪತ್ರಿಕೆಗಳಲ್ಲಿ ಏನೇ ಬರಲಿ, ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅವರ ನಿಖರವಾದ ಅಭಿಪ್ರಾಯವನ್ನು ತಿಳಿಸುತ್ತಾರಾ ?

ಶ್ರೀ ಆರ್. ಗುಂಡೂರಾವ್.—ಪ್ರಥಮವಾಗಿ ಅವರು ಹೇಳಿದ್ದನ್ನೆಲ್ಲಾ ಇಲ್ಲಿ ವಾದ ಮಾಡುವುದು ಬೇಡ, ಕೆಲವು ಸಮಯದಲ್ಲಿ ಅವರು ಅವರಿಗೆ ಅನುಕೂಲವಾದ ರೀತಿಯಲ್ಲಿ ಪಬ್ಲಿಷ್ ಮಾಡಿದ್ದಾರೆ. ಮಾನ್ಯ ಬಸಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ ಪಾರ್ಲಿಮೆಂಟ್ ಸದಸ್ಯರು ಚರ್ಚೆ ಮಾಡುವಾಗ ಅನೇಕ ಸದಸ್ಯರು ಆರೋಪ ಮಾಡಿದ್ದಾರೆ ನಾನು ಇಲ್ಲ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ ಮತ್ತೆ ಪತ್ರಿಕೆಯಲ್ಲಿ ಲೋಕಸಭಾ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ತನಿಖೆ ನಡೆಸುತ್ತೇವೆ. ಯಾವ ಹಂತದಲ್ಲಿ ಯೋಜನೆ ಮಾಡಿದೆ ಅದು ನಾನಾ ಹಂತಗಳಲ್ಲಿ ಆಪಾದನೆಗಳನ್ನು ಮಾಡಿದ್ದಾರೆ ಇದರ ಬಗ್ಗೆ ಪೂರ್ತಿ ವಿಚಾರಣೆ ಆಗಬೇಕಾಗಿದೆ. ಮೈಸೂರು ಪವರ್ ಕಾರ್ಪೊರೇಷನ್‌ನಲ್ಲಿ ಅನೇಕ ಅಂಗಗಳು ಇವೆ ಸುಮಾರು ೧೫೦ ಕೋಟಿ ರೂಪಾಯಿ ಯೋಜನೆಯಲ್ಲಿ ಆಳವಡಿಸಿದ್ದೇವೆ ಇದರ ಬಗ್ಗೆ ವಿಚಾರಣೆ ನಡೆಯಬೇಕಾದ್ದು ನಿಜ ಇದು ಸರ್ಕಾರದ ಗಮನಕ್ಕೆ ಬಂದಿದೆ, ಬಹುಶಃ ಇನ್ನು ೨–೩ ದಿನಗಳಲ್ಲಿ ತನಿಖಾ ಆಯೋಗ ರಚನೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಏನೋ ಜವಾಬ್ದಾರಿ ಇಲ್ಲವೋ ಎನ್ನುವ ರೀತಿಯಲ್ಲಿ ಉತ್ತರ ಕೊಡುತ್ತಿದ್ದಾರೆ. ಕಾಳಿನದಿ ಪ್ರಾಜೆಕ್ಟ್ ಏನು ಇದೆ ಅದರ ಕೆಲಸ ವಿಳಂಬವಾಗಿದೆ ಎನ್ನುವುದನ್ನು ತಾವು ಒಪ್ಪಿದ್ದೀರಿ? ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಚಾರ ಸರಿಯಲ್ಲವೆಂದು ಹೇಳುವುದನ್ನು ಇನ್ನು ಮೇಲೆ ನಾವು ನಂಬುವುದಿಲ್ಲ. ಕಾಳಿನದಿ ಬಗ್ಗೆ ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ ಪುನಃ ಹಿಂದಕ್ಕೆ ಹೋಗಿದ್ದೀರಿ ? ಇದನ್ನೆಲ್ಲಾ ಹೇಳಲಿಲ್ಲವೆಂದು ಪತ್ರಿಕೆಯಲ್ಲಿ ದೂರು ಕೊಡುವಾಗ ತಾವು ಸರಿಯಾದ ರೀತಿಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟು ಅವರು ಸರಿಯಾಗಿ ವರದಿ ಮಾಡದೆ ಇದ್ದರೆ ತರಾಟೆಗೆ ತೆಗೆದು ಕೊಳ್ಳೋಣವಾಗಲಿ ಜವಾಬ್ದಾರಿ ಸ್ಥಾನದಲ್ಲಿ ತಾವು ಇದ್ದೀರಿ? ಸ್ಟೇಟ್‌ಮೆಂಟ್ ಕೊಡುವಾಗ ಜವಾಬ್ದಾರಿಯಿಂದ ಕೊಡಿ, ನಾವು ತಾವು ಹೇಳುವುದನ್ನು ನಂಬಿಕೊಳ್ಳುತ್ತೇವೆ ಮತ್ತು ಜನ ನಂಬುತ್ತಾರೆ ಕಾಳಿನದಿ ಬಗ್ಗೆ ೩–೪ ವರ್ಷಗಳಿಂದ ಪತ್ರಿಕೆಯಲ್ಲಿ ವಿಶೇಷವಾಗಿ ಪ್ರಕಟಣೆ ಓದಿದ್ದೇವೆ ಶ್ರೀಮಾನ್ ನಂಜೇಗೌಡರು ಹಲವಾರು ಆಪಾದನೆಗಳನ್ನು ಮಾಡಿದ್ದಾರೆ ಕೆಲವರು ಡೈರೆಕ್ಟರ್ಸ್ ಅದರಲ್ಲಿ ನಾನ್ ಅಫಿಷಿಯಲ್ ಡೈರೆಕ್ಟರ್ಸ್ ಇದ್ದರು ಯಾರು ಯಾರು ಯಾರಿಗೆ ಕಂಟ್ರಾಕ್ ಕೊಡಬೇಕಾಗಿತ್ತೋ ಕೊಡಲಿಲ್ಲ ಎಂದು ಪತ್ರಿಕೆಯಲ್ಲಿ ನೋಡಿದ್ದೇವೆ. ಯಾರೇ ತಪ್ಪು ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ. ಅದಕ್ಕೆ ಯಾರೇ ಆಪಾದಿತರಿರಲಿ ಯಾರೇ ತಪ್ಪು ಮಾಡಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಈ ಕಾಳಿ ಯೋಜನೆ ಸುಮಾರು ೨೦೦ ರಿಂದ ೨೫೦ ಕೋಟಿರೂಪಾಯಿ ವೆಚ್ಚದ್ದು ಇದೆ ಯಾರೇ ಇಂಜಿನೀಯರುಗಳಿರಲಿ ಯಾರೇ ಅಧಿಕಾರಿಗಳಿರಲಿ, ಐಎಎಸ್ ಅಧಿಕಾರಿಗಳಿರಲಿ ಇದರ ಪ್ರಗತಿ ಕುಂಟಿತವಾಗುವುದಕ್ಕೆ ಯಾರು ಕಾರಣರೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಅದು ಅಧಿಕಾರಿಗಳ ಜವಾಬ್ದಾರಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ವಿವರಗಳನ್ನು ಕೇಳುತ್ತಿದ್ದಾರೋ ಅಥವಾ ವಿವರಗಳನ್ನು ಕೊಡುತ್ತಿದ್ದಾರೋ ?

ಶ್ರೀ ಬಿ. ಬಸವಲಿಂಗಪ್ಪ — ಅಧ್ಯಕ್ಷರೆ ನಾನು ಹೇಳುವುದನ್ನು ಸಾವಧಾನವಾಗಿ ಕೇಳಿ ನಮ್ಮಸರ್ಕಾರದ ವತಿಯಿಂದ ನಾವು ಕೆಲಸ ತೆಗೆದುಕೊಳ್ಳುತ್ತಿದ್ದೇವೆ ಅದಕ್ಕೆ ಹಾಕಿರುವ ಹಣ ಸರಿಯಾಗಿ ಖರ್ಚಾಗಿದೆಯೇ ಎಂದು ನೋಡಬೇಕಾಗುತ್ತದೆ ? ಇದರ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ಅದನ್ನು ತನಿಖೆ ಮಾಡಿಸಿ ಇದರಲ್ಲಿ ಯಾರು ಯಾರು ತಪ್ಪಿತಸ್ಥರು ಎಂಬುದನ್ನು ಸಾಬೀತು ಮಾಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ತನಿಖೆಯನ್ನು ಯಾವ ರೀತಿ ಮಾಡಿಸುತ್ತೀರಿ, ಯಾವಾಗ ಮಾಡಿಸುತ್ತೀರಿ ಅದರ ಟರ್ಮ್ಸ್ ಅಂಡ್ ರೆಫರೆನ್ಸ್ ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ನನಗೆ ಬಹಳ ಅನುಕಂಪ ಇದೆ. ಅವರು ಇದರಲ್ಲಿ ಏತಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆಯೋ ಗೊತ್ತಿಲ್ಲ. ಅವರು ಬಹಳ ಸಂಕಷ್ಟಗಳನ್ನು ಅನುಭವಿಸಿದ್ದಾರೆ. ನಾನು ಏನು ಹೇಳಿದ್ದೇನೆ ಎಂದರೆ ಪತ್ರಿಕೆಯಲ್ಲಿ ಬರುವ ಹೇಳಿಕೆಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಅದನ್ನು ಬೇರೆ ಕಡೆ ಚರ್ಚೆ ಮಾಡೋಣ ಎಂದು. ಅವರು ಏನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ. ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಬಸವಲಿಂಗಪ್ಪನವರು ನನ್ನನ್ನು ತಮಾಷೆಯಾಗಿ ಲೀಲಾಜಾಲವಾಗಿ ಉತ್ತರ ಕೊಡುತ್ತಿದ್ದೇನೆ

ಎಂದು ಹೇಳಿದರು. ನಾನು ತಮಾಷೆಯಾಗಿ, ನಗಾಡಿಕೊಂಡು ಉತ್ತರ ಕೊಟ್ಟ ಮಾತ್ರಕ್ಕೆ ಅದು ಗಂಭೀರತೆಯಿಂದ ಕೂಡಿಲ್ಲ ಎಂದು ತಿಳಿದುಕೊಳ್ಳಬಾರದು. ನಾನು ಮುಖ ದಪ್ಪಗೆ ಮಾಡಿಕೊಂಡು, ಮುಖಗಂಟು ಹಾಕಿಕೊಂಡು ಉತ್ತರ ಕೊಟ್ಟರೂ ಸರ್ಕಾರಿ ಉತ್ತರವೇ ಆಥವಾ ನಗಾಡಿಕೊಂಡು, ತಮಾಷೆಯಾಗಿ ಉತ್ತರ ಕೊಟ್ಟರೂ ಅದು ಸರ್ಕಾರಿ ಉತ್ತರವೇ ಆದ್ದರಿಂದ ಲೀಲಾಜಾಲವಾಗಿ ಉತ್ತರ ಹೇಳುತ್ತಾರೆ ಎಂದೇನು ಹೇಳಿದರು ಈ ಲಾಲಾಜಾಲದಲ್ಲಿ ನನ್ನ ದೃಷ್ಟಿಯೇ ಬೇರೆ, ಅವರ ದೃಷ್ಟಿಯೇ ಬೇರೆ. ಆದ್ದರಿಂದ ಈಗ ಲೀಲಾಜಾಲದ ಪ್ರಶ್ನೆ ಬೇಡ. ಈಗ ಶ್ರೀಮಾನ್ ಬಸವಲಿಂಗಪ್ಪನವರು ಏನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಹೆಚ್ಚಿನ ಹಣ ಖರ್ಚು ಮಾಡಿದ್ದಾರೆ, ಒಂದು ರೀತಿಯಲ್ಲಿ ಇಂಜಿನಿಯರುಗಳು ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಆದ್ದರಿಂದ ನಾನು ಲೋಕ ಸಭಾ ಸದಸ್ಯರ ಜೊತೆಯಲ್ಲಿ ಚರ್ಚೆ ಮಾಡುವಾಗ ಹೊರಗಡೆ ಹೇಳಿದ ಪ್ರಕಾರವೇ ನಾನು ಈಗ ಹೇಳುತ್ತಿದ್ದೇನೆ. ಇದರ ಬಗ್ಗೆ ತನಿಖೆ ಮಾಡಿಸಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ. ಇನ್ನು ಒಂಬೆರಡು ದಿನಗಳಲ್ಲಿ ಇದರ ಬಗ್ಗೆ ಸರ್ಕಾರ ತನ್ನ ಅಭಿಪ್ರಾಯ ವನ್ನು ವ್ಯಕ್ತ ಮಾಡುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಕಾಳಿ ಕರ್ಮಕಾಂಡದ ಬಗ್ಗೆ ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಶರಾವತಿ ಕರ್ಮಕಾಂಡದ ಬಗ್ಗೆ ಹೇಳುತ್ತಿದ್ದರು. ಇವರು ಕಾಳಿ ಕರ್ಮಕಾಂಡದ ಬಗ್ಗೆ ಹೇಳುತ್ತಿದ್ದಾರೆ. ಈ ಕಾಳಿ ಕರ್ಮ ಕಾಂಡದ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ್ದಾರೆ. ಅವರು ಇದನ್ನು ಎನ್‌ಕ್ವೈರಿ ಮಾಡಲು ಕಮಿಷನ್ ಆಫ್ ಎನ್‌ಕ್ವೈರಿ ಮಾಡುತ್ತಾರೆಯೇ ? ಆಥವಾ ಜುಡಿಷಿಯಲ್ ಆಫೀಸರ್ ಅನ್ನು ನೇಮಕ ಮಾಡುತ್ತಾರೆಯೇ ಆಥವಾ ಒಬ್ಬ ಆಡ್ಮಿನಿಸ್ಟ್ರೇಟೀವ್ ಆಫೀಸರನ್ನು ನೇಮಿಸುತ್ತಾರೆಯೇ ? ಯಾವ ರೀತಿ ಅದನ್ನು ತನಿಖೆ ಮಾಡಿಸುತ್ತಾರೆ ಎಂಬುದು ಗೊತ್ತಾಗಬೇಕು. ಆದ್ದರಿಂದ ಸರ್ಕಾರದವರು ಯಾವ ತರಹ ಎನ್‌ಕ್ವೈರಿ ಮಾಡಿಸುತ್ತಾರೆ, ಎಷ್ಟು ದಿನಗಳಲ್ಲಿ ಅದನ್ನು ಎನ್‌ಕ್ವೈರಿ ಮಾಡಿಸುತ್ತಾರೆ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ವೈಟ್ ಪೇಪರ್ ಹೊರಡಿಸುತ್ತೇವೆ ಎಂದು ಹೇಳಿದ್ದಾರೆ. ಇದು ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಇದು ಬಹಳ ಮಹತ್ವವಾದ ವಿಷಯ. ಕಾಳಿ ಯೋಜನೆಯನ್ನು ಸರಿಯಾಗಿ ಕಾರ್ಯಗತ ಮಾಡದೇ ಇರುವುದರಿಂದ ಹೆಚ್ಚು ಹಣ ಖರ್ಚಾಗುತ್ತದೆ. ಮತ್ತು ವಿದ್ಯುಚ್ಛಕ್ತಿ ದೊರೆಯದೇ ಇರುವುದರಿಂದ ಅದರ ಪರಿಣಾಮ ಆರ್ಥಿಕವಾಗಿ ರಾಜ್ಯದ ಜನತೆಗೆ ಉಂಟಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಮತ್ತು ಎಷ್ಟು ದಿವಸಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಆರ್. ಗುಂಡೂರಾವ್.—ಇನ್ನು ಒಂದೆರಡು ದಿವಸಗಳಲ್ಲಿ ಈ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಇದನ್ನು ತನಿಖೆ ಮಾಡಿಸುವುದಕ್ಕೆ ಕಮಿಷನ್ ಆಫ್ ಎನ್‌ಕ್ವೈರಿ ನೇಮಿಸುತ್ತೀರಾ, ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತಿರಾ ಎಂದು ಕೇಳಿದ್ದಾರೆ. ಯಾವ ತನಿಖಾ ಆಯೋಗದಿಂದ ನ್ಯಾಯ ಸಿಕ್ಕುತ್ತದೆ ಎಂದು ತಿಳಿದುಕೊಂಡು ಯಾವುದೇ ಒತ್ತಾಯಕ್ಕೂ ಮಣಿಯದೇ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಇದರ ಬಗ್ಗೆ ಎನ್‌ಕ್ವೈರಿ ಮಾಡಲು ಒಂದು ತನಿಖೆ ಆಯೋಗವನ್ನು ಇನ್ನು ಎರಡು ಮೂರು ದಿವಸಗಳಲ್ಲಿ ನೇಮಕ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಎನ್‌ಕ್ವೈರಿ ಕಮಿಷನ್ ನೇಮಕ ಮಾಡುವುದರಲ್ಲಿ ನನಗೆ ನಂಬಿಕೆ ಇಲ್ಲ ಎಂದು ತಾವು ಹೇಳಿದ್ದೀರಿ ಅಲ್ಲವೇ ?

ಶ್ರೀ ಆರ್. ಗುಂಡೂರಾವ್.—ಕಮಿಷನ್ ಆಫ್ ಎನ್‌ಕ್ವೈರಿಯನ್ನು ರಾಜಕೀಯ ದುರುದ್ದೇಶದ ವಿಚಾರಣೆಗೋಸ್ಕರ ಪ್ರತೀಕಾರ ಮನೋಭಾವನೆಯಿಂದ ಸರ್ಕಾರ ಮಾಡುವುದಿಲ್ಲ ಎಂದು ಹೇಳಿದ್ದೇವೆ. ಈ ದೃಷ್ಟಿಯಿಂದ ಎನ್‌ಕ್ವೈರಿ ಕಮಿಷನ್ ನೇಮಕ ಮಾಡುವುದರಲ್ಲಿ ನಂಬಿಕೆ ಇಲ್ಲ ಎಂದು ಹೇಳಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಕಾಳಿ ಯೋಜನೆಯ ಪ್ರಥಮ ಜನರೇಟರ್ ಎಷ್ಟು ಪವರ್ ಉತ್ಪಾದನೆ ಮಾಡಬೇಕಾಗಿತ್ತೋ ಅಷ್ಟು ಉತ್ಪಾದನೆ ಮಾಡುತ್ತಿಲ್ಲ ಎಂದು ಗೊತ್ತಾಗಿದೆ. ಇದಕ್ಕೆ ಕಾರಣವೇನು ?

ಶ್ರೀ ಆರ್. ಗುಂಡೂರಾವ್.—ಇದಕ್ಕೆ ಉತ್ತರವನ್ನು ತಮ್ಮ ಪ್ರಶ್ನೆಗೆ ಲಿಖಿತ ಉತ್ತರವನ್ನೇನು ಕೊಟ್ಟಿದ್ದೇವೆ ಅದರಲ್ಲಿ ಇದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸಿದರೆ ಇನ್ನೂ ಹೆಚ್ಚಿನ ಉತ್ತರವನ್ನು ಹೇಳಬಹುದು.

SRI M. C. BASAPPA.—You have said that there is delay in commissioning. You have not said that you are generating 135 maga watts. According to experts, the first unit of Kali Nadi commissioned behind schedule is not generating the power to its installed capacity even to this day, What do you say for that ?

SRI R. GUNDU RAO.—What should I say for that ?

ಶ್ರೀ ಎಂ. ಸಿ. ಬಸಪ್ಪ.—ಇವೊತ್ತು ದೇಶದಲ್ಲಿ ವಿದ್ಯುಚ್ಛಕ್ತಿ ಇಲ್ಲದೆ ಬಹಳ ತೊಂದರೆಯಾಗಿದೆ ಹೀಗಿರುವಾಗ ಕಾಳಿ ನದಿಯ ಒಂದು ಜನರೇಟರ್ ಕೂಡ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಉತ್ಪಾದನೆ ಮಾಡುತ್ತಿಲ್ಲ. ಇದಕ್ಕೆ ಕಾರಣಗಳೇನು ?

ಶ್ರೀ ಆರ್, ಗುಂಡೂರಾವ್.—ಕಾಳಿ ನದಿಯ ಫಸ್ಟ್ ಯೂನಿಟ್ ಕೆಲಸ ನಡೆಯುತ್ತಿತ್ತು, ಆದರೆ ನಾನಾ ಕಾರಣಗಳಿಂದ ಅದು ನಿಂತು ಹೋಗಿತ್ತು. ಆದರೆ ಬಗ್ಗೆ ವಿವರಣೆ ಕೊಟ್ಟಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ.—ಯಾವ ಕಾರಣಕ್ಕಾಗಿ ಅದು ನಿಂತು ಹೋಗಿತ್ತು? ಟೆಕ್ನಿಕಲ್ ಡಿಫಿಕಲ್ಟಿಯೇ ಅಥವಾ ಅದರಲ್ಲಿ ನೀರು ಇರಲಿಲ್ಲವೇ ? ಯಾವ ಕಾರಣಕ್ಕಾಗಿ ಅದನ್ನು ನಿಲ್ಲಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮುಖ್ಯವಾಗಿ ತಾಂತ್ರಿಕ ಕಾರಣಗಳಿಂದ ಅದು ನಿಂತು ಹೋಗಿತ್ತು.

ಶ್ರೀ ಎಂ. ಸಿ. ಬಸಪ್ಪ.—ತಾಂತ್ರಿಕ ಕಾರಣ ಏನು ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ನಮಗೆ ಅಧಿಕಾರವಿಲ್ಲವೇ ? ಬೇಕಾದರೆ ನಿಮ್ಮ ಅಧಿಕಾರಿಗಳನ್ನು ಕೇಳಿ ಹೇಳಿ.

ಶ್ರೀ ಆರ್. ಗುಂಡೂರಾವ್.—ತಾಂತ್ರಿಕ ಕಾರಣಗಳು ಎಂದರೆ ಟನಲ್‌ನಲ್ಲಿ ನೀರು ಜಾಸ್ತಿ ಬಂದಿರ ಬಹುದು. ಸಿಲ್ಟ್ ತುಂಬಿಕೊಂಡು ನಿಂತು ಹೋಗಿರಬಹುದು. ಇಂಥಾ ಕಾರಣಗಳಿಂದ ಅದು ನಿಂತು ಹೋಗಿತ್ತು.

SRI M. C. BASAPPA.—Can't the Government be specific about it ? Why it is not producing power to its installed capacity ?

SRI R. GUNDU RAO.—It is because the silt has accumulated in he tunnel and the flood has come with the result it has not been possible to operate it.

Janatha Houses in Faratabad Hobli of Gulbarga District

327. SRI S.F. BHAIRI (Shahabad), SRI B.V. KAKKILAYA (Vittal).—Will the Minister for Housing and Urban Development be pleased to state.—

(a) the number of Janatha Houses constructed upto the end of 1977-78 in the villages of Faratabad Hobli of Gulbarga Taluk;

(b) the number of Janatha Houses sanctioned for these villages in 1978-79;

(c) if no Janatha Houses have been sanctioned or built in these villages, the reason for the same?